ಶ್ರೀ ಎ.ಕೃಷ್ಣಪ್ಪ:- ಹಾಲಿ ಸರ್ಕಾರದ ಗೈಡ್‌ಲೈನ್ಸ್ ಏನಿದೆಯೋ ಅದರ ಪ್ರಕಾರ ಅವರಿಗೆ ಪುರಸ್ಕಾರವನ್ನು ಕೊಡುತ್ತೇವೆ.

ಚಿಕ್ಕಮಮಗಳೂರು ಜಿಲ್ಲೆ ಬೀರೂರು ಕ್ಷೇತ್ರದ ಎಮ್ಮೆದೊಡ್ಡಿಯಲ್ಲಿರುವ ಗೋಸದನವನ್ನು ಅಭಿವೃದ್ಧಿಪಡಿಸುವುದು.

185(1514) ಶ್ರೀ ಮಲ್ಲಿಕಾರ್ಜುನ ಕೆ.ಬಿ. (ಬೀರೂರು) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕಮಗಳೂರು ಜಿಲ್ಲೆ ಬೀರೂರು ಕ್ಷೇತ್ರದ ಎಮ್ಮೆದೊಡ್ಡಿಯಲ್ಲಿ ಗೋಸದನವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಎಷ್ಟು ಎಕರೆ ಜಮೀನು ಈ ಗೋಸದನಕ್ಕೆ ಇದೆ. ಎಷ್ಟು ಎಕರೆ ಗೋಸದನದ ಸ್ವಾಧೀನದಲ್ಲಿದೆ?

ಇ) ಈ ಗೋಸದನವನ್ನು ಅಭಿವೃದ್ಧಿಪಡಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಎಂ. ಮಹಾದೇವ್(ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಹೌದು

ಆ) 10 ಎಕರೆ ಜಮೀನು ಗೋಸದನಕ್ಕೆ ಇದೆ. 10 ಎಕರೆ ಗೋಸದನದ ಸ್ವಾಧೀನದಲ್ಲಿದೆ.

ಇ) ಕಟ್ಟಡಗಳ ದುರಸ್ತಿ ಮತ್ತು ಗೋಸದನದ ಸುಧಾರಣೆಗಾಗಿ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಇದೊಂದು ಗೋಸದನವಿದೆ. ಇದು ಪೂರ್ಣವಾಗಿ ಹಾಳಾಗಿರುವ ಬಗ್ಗೆ ಮಾನ್ಯ ಸಚಿವರು ಈಗಾಗಲೇ ಗಮನಿಸಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಈ ಗೋಸದನಕ್ಕೆ ಸಂಬಂಧಪಟ್ಟಿರತಕ್ಕಂತಹ ಎಷ್ಟು ಎಕರೆ ಜಮೀನು ಇದೆ ಎನ್ನುವುದು, ಅದರಲ್ಲಿ 3652 ಎಕರೆ ಇದಕ್ಕೆ ಸಂಬಂಧಪಟ್ಟಿರುವುದು ಇದೆಯಲ್ಲಾ ಅದು ಈಗ ಯಾರ ಸ್ವಾಧೀನದಲ್ಲಿದೆ? 1089 ಎಕರೆ ಅರಣ್ಯ ಇಲಾಖೆ ಕೊಟ್ಟಿರತಕ್ಕಂತಹ ಈ ಗೋಸದನದ ಜಮೀನು ಯಾರ ಸ್ವಾಧೀನದಲ್ಲಿದೆ ಎಂಬುದರ ಬಗ್ಗೆ ಹೇಳಬೇಕು. ಅಕಸ್ಮಾತ್ ಈ ಜಾಗವು ಒತ್ತುವರಿಯಾಗಿದ್ದರೆ ಇದನ್ನು ಬಿಡಿಸುವುದಕ್ಕೆ ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಗೋಸದನದ ಅಭಿವೃದ್ಧಿಗೆ ಎಷ್ಟು ಹಣವನ್ನು ಮಂಜೂರು ಮಾಡಿದ್ದೀರಿ? ಹಣ ಮಂಜೂರು ಮಾಡುವುದಕ್ಕೆ ಆಗದಿದ್ದರೆ ಇದನ್ನು ಖಾಸಗಿಯವರಿಗೆ ವಹಿಸಿಕೊಡತಕ್ಕಂತಹ ಸರ್ಕಾರದ ಯೋಚನೆ ಏನಾದರೂ ಇದೆಯೇ? ಇದು ಎರಡನೆಯ ಪ್ರಶ್ನೆ. ಇನ್ನು ಮೂರನೆಯ ಪ್ರಶ್ನೆ ಏನೆಂದರೆ, ಈ ಫಾರ್ಮ್‌ನಲ್ಲಿರತಕ್ಕಂತಹ, ಪಶು ಇಲಾಖೆಯಲ್ಲಿರತಕ್ಕಂತಹ ಫಾರ್ಮಗಳು ಮತ್ತು ಗೋಸದನವನ್ನು ಅಭಿವೃದ್ಧಿಪಡಿಸುವುದಕ್ಕೆ, ಅದರ ಮೇಲು ಉಸ್ತುವಾರಿಯನ್ನು ನೋಡಿಕೊಳ್ಳುವುದಕ್ಕೆ ಏನಾದರೂ ಒಂದು ಸಮಿತಿಯನ್ನು ರಚನೆ ಮಾಡುವ ಬಗ್ಗೆ ಸರ್ಕಾರ ಯೋಚನೆ ಮಾಡಿದೆಯೇ ಎಂದು ನಾನು ಕೇಳುತ್ತಿದ್ದೇನೆ; ದಯಮಾಡಿ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

ಶ್ರೀ ಎಂ.ಮಹದೇವ:- ಸನ್ಮಾನ್ಯ ಅಧ್ಯಕ್ಷರೆ, ಅಮೃತ್‌ಮಹಲ್ ಕಾವಲ್‌ಗೆ ಉಳಿದಿರುವ 3632 ಎಕರೆ ಕ್ಷೇತ್ರದ ಪೈಕಿ 1380 ಕ್ಷೇತ್ರಗಳಲ್ಲಿ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಿ ಕಂದಾಯ ಇಲಾಖೆಯವರು ಸಾಗುವಳಿ ಚೀಟಿಯನ್ನು ಕೊಟ್ಟಿರುತ್ತಾರೆ. ಇಲಾಖೆಯ

ವಶದಲ್ಲಿರತಕ್ಕಂತಹ 1085 ಎಕರೆ ಕ್ಷೇತ್ರದಲ್ಲಿ ಗಿಡಗಳನ್ನು ನೆಡಲು ಅರಣ್ಯ ಇಲಾಖೆಯವರಿಗೆ ಪರವಾನಗಿಯನ್ನು ನೀಡಲಾಗಿದೆ. ಇನ್ನುಳಿದ 1100 ಕ್ಷೇತ್ರ ಅನಧಿಕೃತ ಬಗರ್‌ಹುಕುಂ ಸಾಗುವಳಿಗೆ ಒಳಪಟ್ಟಿದೆ. ತಾವು ಏನು ಪ್ರಶ್ನೆಯನ್ನು ಕೇಳಿದ್ದೀರಿ, ಸದರಿ ಎಮ್ಮೆದೊಡ್ಡಿಯ ಅಮೃತ್‌ಮಹಲ್ ಕಾವಲ್‌ನ ಒಂದು ಭಾಗದಲ್ಲಿ ಒಂದು ಗೋಸದನವು ಇದೆ, ಗೋಸದನಕ್ಕೆ ಸಂಬಂಧಿಸಿದಂತೆ 10 ಎಕರೆ ಜಾಗವು ಇದ್ದು ಮಧ್ಯಭಾಗದಲ್ಲಿ ಹಳೆಯ ಕಟ್ಟಡಗಳಿರುತ್ತವೆ. ಇದರ ಬಗ್ಗೆ ತಮಗೂ ಗೊತ್ತಿದೆ. ನಾನೂ ಕೂಡ ಈಗ ತಾನೇ ನೋಡಿದ್ದೇನೆ. ಈ ಕಟ್ಟಡವನ್ನು ಕಟ್ಟಲು 1856ರಲ್ಲಿ ರಾಜ್ಯ ಜೈನ ಸಂಘವು 1ಲಕ್ಷದ 11 ರೂಪಾಯಿಗಳನ್ನು ದೇಣಿಗೆಯಾಗಿ ನೀಡಿದ್ದು ಈಗ ಸದರಿಗೋಸದನವು ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯಲ್ಲಿ ಬರುತ್ತದೆ. ಗೋಸದನದ ಕಟ್ಟಡ ಹಾಗೂ ದುರಸ್ಥಿ ಕಾರ್ಯಗಳಿಗಾಗಿ 11.66 ಲಕ್ಷ ರೂಪಾಯಿಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿ ಮಂಜೂರಾತಿಗಾಗಿ ಸಲ್ಲಿಸಲಾಗಿದೆ. ಈ ಗೋಸದನದ ಮೇನ್‌ಟೆನೆನ್ಸ್ ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿಯ ವ್ಯಾಪ್ತಿಗೆ ಬರುತ್ತದೆ. ಅದನ್ನು ಇಂಪ್ರೂವ್ ಮಾಡತಕ್ಕಂತಹ ಕೆಲಸವನ್ನು ಅವರು ಮಾಡಬೇಕು. ಈಗ ಒಂದು ಸಾವಿರ ಎಕರೆ ಜಾಗವನ್ನು ಅರಣ್ಯ ಇಲಾಖೆಯವರಿಗೆ ಕೊಟ್ಟಿದ್ದೇವೆ, ಅವರು ತಕ್ಷಣದಲ್ಲಿ ಹಾರ್ವೆಸ್ಟ್ ಆದಮೇಲೆ ಗಿಡಮರಗಳನ್ನು ಕಡಿದುಕೊಂಡಮೇಲೆ ಅರಣ್ಯದ ಜಮೀನನ್ನು ನಾವು ತೆಗೆದುಕೊಂಡು ಅದಕ್ಕೆ ಸೇರಿದಹಾಗೆ 10 ಎಕರೆ ಗೋಸದನಕ್ಕೆ ಸೇರಿದಂತೆ ಇರತಕ್ಕಂತಹ ಫಾರೆಸ್ಟ್ ಜಮೀನನ್ನು ತೆಗೆದುಕೊಂಡು ಅದನ್ನು ಅಭಿವೃದ್ಧಿಪಡಿಸುತ್ತೇವೆ. ಮತ್ತೊಂದು ಉತ್ತಮವಾದ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ, ಹಿಂದಿನ ಮಹಾರಾಜರ ಕಾಲದಿಂದ ಬಂದಿರತಕ್ಕಂತಹ, ಟಿಪ್ಪುಸುಲ್ತಾನ್ ಕಾಲದಿಂದ ಪ್ರಸಿದ್ಧಿಗೆ ಬಂದಿರತಕ್ಕಂತಹ ಅಮೃತ್‌ಮಹಲ್ ಕಾವಲ್ ಏನಿದೆ ಆ ಜಮೀನನ್ನು ಕೆಲವರು ಒತ್ತುವರಿ ಮಾಡಿಕೊಂಡು ಹೋಗುತ್ತಿದ್ದಾರೆ. ಆ ಒತ್ತುವರಿಯನ್ನು ತಡೆಗಟ್ಟುವ ಬಗ್ಗೆ ಹಿಂದಿನ ತಳಿಗಳು ಏನಿದ್ದಾವೆ, ಜಾನುವಾರುಗಳಿಗೆ ಉತ್ತಮವಾದಂತಹ ಅಮೃತಮಹಲ್ ತಳಿಗಳು ಏನಿವೆ ಆ ಪರಂಪರೆಯನ್ನು ಉಳಿಸಿಕೊಂಡು ಬರುವುದಕ್ಕೆ ಈಗ ಒಂದು ಸಮಿತಿಯನ್ನು ರಚನೆ ಮಾಡಬೇಕೆಂದು ಸರ್ಕಾರದವರು ನಿರ್ಧಾರ ಮಾಡಿದ್ದಾರೆ. 10 ಜನರಿರುವ ಒಂದು ಸಮಿತಿಯನ್ನು ಮಾಡಿ ಅದರಲ್ಲಿ ಶಾಸಕರನ್ನು ಸೇರಿಸಿಕೊಂಡು, ಆ ಸಮಿತಿಯು ಅಭಿವೃದ್ಧಿಯ ವ್ಯವಸ್ಥೆಯನ್ನು ನೋಡಿಕೊಳ್ಳುವುದಕ್ಕೆ ಸರ್ಕಾರ ಸಮಿತಿಯನ್ನು ರಚನೆ ಮಾಡಿ ಕೈಗೆ ತೆಗೆದುಕೊಳ್ಳುವುದಕ್ಕೆ ಪರಿಶೀಲನೆ ಮಾಡುತ್ತದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಮಾನ್ಯ ಸಚಿವರು ನಾನು ಕೇಳಿದ ಒಂದು ಪ್ರಶ್ನೆಗೆ ಉತ್ತರವನ್ನು ಹೇಳಲಿಲ್ಲ. ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ವ್ಯಾಪ್ತಿಯಲ್ಲಿ ಇದೊಂದೇ ಗೋಸದನವಿರುವುದು, ಇದನ್ನು ಪೂರ್ಣವಾಗಿ ಹಾಳು ಮಾಡಿರುವ ಬಗ್ಗೆ ಮಾನ್ಯ ಸಚಿವರು ಗಮನಿಸಿದ್ದಾರೆ. ಇದನ್ನು ಖಾಸಗಿಯವರು ಅಭಿವೃದ್ಧಿಪಡಿಸುತ್ತೇವೆಂದು ಮುಂದೆ ಬಂದರೆ, ಅವರಿಗೆ ಕೊಡಲಿಕ್ಕೆ ಸರ್ಕಾರ ತಯಾರು ಇದೆಯೇ ಎಂಬ ಪ್ರಶ್ನೆಗೆ ಅವರು ಉತ್ತರವನ್ನು ಹೇಳಲಿಲ್ಲ. ಇದಕ್ಕೋಸ್ಕರ ಜಿಲ್ಲಾ ಪಂಚಾಯಿತಿಯಲ್ಲಿ ಹಣವಿಲ್ಲ, ಜಿಲ್ಲಾ ಪಂಚಾಯಿತಿಯ ವ್ಯಾಪ್ತಿಯಿಂದ ಪುನಃ ಏನಾದರೂ ರಾಜ್ಯ ಸರ್ಕಾರದವರು ತಮ್ಮ ವ್ಯಾಪ್ತಿಗೆ ತೆಗೆದುಕೊಂಡು ಅಭಿವೃದ್ಧಿಪಡಿಸುತ್ತೀರಾ? ಇದನ್ನು ನಾನು ಮೊದಲನೆಯ ಪ್ರಶ್ನೆಯಾಗಿ ಏತಕ್ಕೆ ಕೇಳಿದೆನೆಂದರೆ, ಕರ್ನಾಟಕ ರಾಜ್ಯ ಜೈನ ಸಂಘದವರು ಇದನ್ನು ಅಭಿವೃದ್ಧಿಪಡಿಸುತ್ತೇವೆಂದು ಮುಂದೆ ಬಂದಿದ್ದಾರೆ. ಅವರು 1959ನೇ ಇಸವಿಯಲ್ಲಿ 1 ಲಕ್ಷದ 59 ರೂಪಾಯಿಗಳನ್ನು ಕೊಟ್ಟಿದ್ದರು. ಇದಕ್ಕಾಗಿ ಅವರು 30 ರಿಂದ 40 ಲಕ್ಷ

ರಾಪಾಯಿಗಳನ್ನು ಖರ್ಚು ಮಾಡಿ ಅಭಿವೃದ್ಧಿಪಡಿಸುವುದಕ್ಕೆ ಯೋಚನೆ ಮಾಡುತ್ತಿರುವಂತಹ ಸಂದರ್ಭದಲ್ಲಿ ಇದರ ಬಗ್ಗೆ ತಾವು ಯೋಚನೆ ಮಾಡುತ್ತೀರಾ? ಇಲ್ಲಾ, ತಾವೇ ಇದನ್ನು ಅಭಿವೃದ್ಧಿಪಡಿಸುತ್ತೀರಾ? ಈ ಎರಡು ಪ್ರಶ್ನೆಗಳಿಗೆ ನಾನು ತಮ್ಮಿಂದ ಉತ್ತರವನ್ನು ಕೇಳಬಯಸುತ್ತಿದ್ದೇನೆ. ಮೇಲು ಉಸ್ತುವಾರಿ ಸಮಿತಿಯನ್ನು ಮಾಡುತ್ತೇವೆಂದು ತಾವು ಹೇಳುತ್ತಿದ್ದೀರಿ, ಅದಕ್ಕೆ ಯಾರ್ಯಾರನ್ನು ಸದಸ್ಯರನ್ನಾಗಿ ಮಾಡುತ್ತೀರಿ ಎನ್ನುವಂತಹ ಮಾತನ್ನು ತಾವು ಹೇಳಬೇಕಾಗುತ್ತದೆ.

ಶ್ರೀ ಎಂ.ಮಹದೇವ:- ಸರ್ಕಾರದವರು ಅದನ್ನು ಅಭಿವೃದ್ಧಿ ಮಾಡತಕ್ಕಂತಹ ವಿಚಾರದಲ್ಲಿ ಆ ಒಂದು ಪ್ರಸ್ತಾವನೆ ನಮ್ಮ ಮುಂದೆ ಇದೆ. ಗೋಸದನವನ್ನು ಅಭಿವೃದ್ಧಿ ಮಾಡತಕ್ಕಂತಹ ಪ್ರಸ್ತಾವನೆ ಸರ್ಕಾರದಲ್ಲಿಲ್ಲ. ಖಾಸಗಿಯವರು ಏನಾದರೂ ಮುಂದೆ ಬಂದು ಅದನ್ನು ಅಭಿವೃದ್ಧಿಪಡಿಸುತ್ತೇವೆ ಎಂದು ಹೇಳಿದರೆ ಅದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ. ತಾವು ಜಿಲ್ಲಾ ಪಂಚಾಯಿತಿಯಲ್ಲಿ ಆವರ್ತನಿಧಿಯಿಂದ ಅದನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು. ಸದನ ಸಮಿತಿಗೆ ಯಾರ್ಯಾರನ್ನು ಸದಸ್ಯರನ್ನಾಗಿ ಮಾಡುತ್ತೀರೆಂದು ಕೇಳಿದ್ದೀರಿ. ಇದರ ಬಗ್ಗೆ ನಾನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ; ಶಾಸಕರು, ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು, ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರು, ಆ ಕಾವಲ್‌ಗೆ ಸೇರಿದಂತಹ ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟಂತಹ ಅಧಿಕಾರಿಗಳು ಹಾಗೂ ಇತರೆಯವರನ್ನು ಸೇರಿಸಿ ಒಂದು ಸಮಿತಿಯನ್ನು ಮಾಡುತ್ತೇವೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ನನ್ನದೊಂದೇ ಪ್ರಶ್ನೆ. ಈ ಗೋಸದನವನ್ನು ಈ ವರ್ಷದಲ್ಲಿ ಅಭಿವೃದ್ಧಿಪಡಿಸುತ್ತೀರಾ? ಕಳೆದ 20 ವರ್ಷಗಳಿಂದ ಈ ಗೋಸದನ ಹಾಳಾಗಿ ಹೋಗಿದೆ. ಈ ವರ್ಷ ಅದನ್ನು ಅಭಿವೃದ್ಧಿಪಡಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ.ಮಹದೇವ:- ಈಗ ಮಾನ್ಯ ಸದಸ್ಯರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ, ಅದರ ಬಗ್ಗೆ ಪರಿಶೀಲನೆ ಮಾಡಿ ಅಗತ್ಯ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಬಿ.ಆರ್.ನೀಲಕಂಠಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಶನಿವಾರ ಮತ್ತು ಬಾನುವಾರ ಅಲ್ಲಿಗೆ ಬಂದು ತಪಾಸಣೆ ಮಾಡಿದ್ದಾರೆ. ಕಾವಲುಗಾರರನ್ನು ಬಿಡಿಸುವ ಬಗ್ಗೆ, ಬಗರ್‌ಹುಕು ಮಾಡಿರತಕ್ಕಂತಹ ಕಾವಲುಗಾರರು ಸುಮಾರು 50 ವರ್ಷಗಳಿಂದಲೂ ಅಲ್ಲಿ ಕಾವಲುಗಾರರಾಗಿ ಉಳಿದುಕೊಂಡಿದ್ದಾರೆ; ಅವರನ್ನು ಶಾಶ್ವತವಾಗಿ ಬಿಡಿಸುವುದಕ್ಕೆ ಪ್ರಯತ್ನ ಮಾಡದೇ ಇದ್ದರೆ ಅಮೃತ್‌ಮಹಲ್ ಕಾವಲ್ ಏನಿದೆ ಅದನ್ನು ಅವರುಗಳೇ ಅಧಿಪತ್ಯವನ್ನು ಮಾಡಿಕೊಂಡಿರುತ್ತಾರೆ. ಅದನ್ನು ಬಿಡಿಸುವುದಕ್ಕೆ ಸರ್ಕಾರ ಒಂದು ಸೂಕ್ತವಾದ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಅವರು ಎಲ್ಲಾ ಕಡೆಗಳಲ್ಲೂ ಮರಗಳನ್ನು ಕಡಿಯುತ್ತಾರೆ. ಅಮೃತ್‌ಮಹಲ್ ಕಾವಲ್ ಎಲ್ಲಿರುತ್ತದೆಯೋ ಅಲ್ಲಿ ದನಕರುಗಳನ್ನು ಮೇಯುವುದಕ್ಕೆ ಅವರುಗಳು ಬಿಡುವುದಿಲ್ಲ. ಕಾವಲುಗಾರರು ತನ್ನದೇ ಗುತ್ತಿಗೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಎಲ್ಲಿಯತನಕ ತಾವು ಕಾವಲುಗಾರರನ್ನು ಬಿಡಿಸುವುದಿಲ್ಲವೋ, ಸರ್ಕಾರದವರು ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳುವುದಿಲ್ಲವೋ ಅಲ್ಲಿಯವರೆವಿಗೆ ಅಮೃತ್‌ಮಹಲ್ ಕಾವಲ್ ಆಗುವುದಿಲ್ಲ. ತಾವೇನು 2 ದಿವಸ ಸುದೀರ್ಘವಾಗಿ ತಪಾಸಣೆ ಮಾಡಿದ್ದೀರಿ, ಅಮೃತ್‌ಮಹಲ್‌ನ ಬಗ್ಗೆ ನಾವು ಎಲ್ಲಾ ಮಾಹಿತಿಯನ್ನು ತಮಗೆ ಕೊಟ್ಟಿದ್ದೇವೆ. ಅದರ ಬಗ್ಗೆ ತಾವು ಸಂಕ್ಷಿಪ್ತವಾಗಿ ಮಾಡುತ್ತೇವೆಂದು ಹೇಳುತ್ತೀರಿ, ಸಮಿತಿಯನ್ನು ರಚಿಸುತ್ತೇವೆಂದು ತಾವು ಹೇಳುತ್ತೀರಿ, ಅದನ್ನು ಆಯಾಯ ಭಾಗದಲ್ಲಿ

ಸಮಿತಿಯನ್ನು ರಚಿಸಬೇಕೆ ಹೋರತು ಎಲ್ಲಾ ಹೋಲ್‌ಸೇಲ್ ಮಾಡುವುದಕ್ಕೆ ಹೋಗಬೇಡಿ. ಆ ದೃಷ್ಟಿಯಿಂದ ಮೊದಲು ಅತಿಮುಖ್ಯವಾಗಿ ಕಾವಲುಗಾರರನ್ನು ಬಿಡಿಸುವುದಕ್ಕೆ ಮತ್ತು ಬಗರ್‌ಹುಕುಂ ಆಗಿರತಕ್ಕಂತಹ ಜಮೀನನ್ನು ಜಮೀನ್ದಾರರಿಂದ ಬಿಡಿಸುವುದಕ್ಕೆ ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಅದರ ಬಗ್ಗೆ ತಾವು ದಯಮಾಡಿ ಹೇಳಬೇಕು.

ಶ್ರೀ ಎಂ.ಮಹದೇವ:- ಎಲ್ಲೆಲ್ಲಿ ಕಾವಲುಗಳಿದ್ದಾವೆ ಅಲ್ಲಿ ಸಮಿತಿಗಳನ್ನು ರಚನೆ ಮಾಡುತ್ತೇವೆ. ಮಾನ್ಯ ಸದಸ್ಯರು ಬಗರ್‌ಹುಕುಂ ಮಾಡಿರತಕ್ಕಂತಹವರನ್ನು ಬಿಡಿಸಬೇಕೆಂದು ಹೇಳಿದ್ದಾರೆ; ರಾಜಮಹಾರಾಜರ ಕಾಲದಿಂದಲೂ ಕಾವಲ್‌ಗೋಸ್ಕರ ಕೆಲವು ಜನರಿಗೆ ಜಮೀನನ್ನು ನೋಡಿಕೊಳ್ಳುವುದಕ್ಕೆ ಅಲ್ಲಿ ಕೊಟ್ಟಿದ್ದಾರೆ. ಅದರ ಬಗ್ಗೆ ಅಧ್ಯಯನವನ್ನು ಮಾಡಿ ಇವರು ಎಷ್ಟು ವರ್ಷದಿಂದ ಮಾಡುತ್ತಿದ್ದಾರೆ, ಕೆಲವರಿಗೆ 5-5 ಕೋಟ್ಟಿದ್ದಾರೆ, ಅವರು ಬಹುಶಃ ನಮಗೆ ತಿಳಿದ ಹಾಗೆ 50 ಎಕರೆಯತನಕ ಎನ್‌ಕ್ರೋಚ್ ಮಾಡಿಕೊಂಡು ಅಲ್ಲಿ ದನಗಳನ್ನು ಮೇಯಿಸತಕ್ಕಂತಹ ವರದಿಗಳು ನಮಗೆ ಬಂದಿವೆ. ಅವರಿಗೆ ಕೊಟ್ಟಿರುವುದು 5 ಎಕರೆ ಆದರೆ 50 ಎಕರೆಯತನಕ ಎನ್‌ಕ್ರೋಚ್ ಮಾಡಿಕೊಂಡು ಅವರುಗಳು ದನಗಳನ್ನು ಮೇಯಿಸುತ್ತಿದ್ದಾರೆ. ಈ ಒಂದು ಪರಿಸ್ಥಿತಿಯಲ್ಲಿ ನಾವು ಬೌಂಡರಿಯನ್ನು ಫಿಕ್ಸ್ ಮಾಡಿಸುತ್ತಿದ್ದೇವೆ. ಎಲ್ಲೆಲ್ಲಿ ಕಾವಲುಗಳಿದ್ದಾವೆ, ನಮ್ಮ ಲ್ಯಾಂಡ್ ಎಷ್ಟಿದೆ ಎಂಬುದರ ಬಗ್ಗೆ ಬೌಂಡರಿಯನ್ನು ಫಿಕ್ಸ್ ಮಾಡಿಸಿ ಇವರಿಗೆ ಎಷ್ಟು ಹಿಂದೆ ಕೊಟ್ಟಿದ್ದಾರೆ ಅಷ್ಟನ್ನು ಕಳೆದು ರೆಗ್ಯುಲರೈಸ್ ಮಾಡಬೇಕೆ ಅಥವಾ ಬೇಡವೇ ಎಂಬುದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ. ಇದರ ಬಗ್ಗೆ ತಕ್ಷಣ ನಾವು ಕ್ರಮವನ್ನು ಕೈಗೊಳ್ಳುತ್ತೇವೆ;

ಶ್ರೀ ಬಿ.ಆರ್. ನೀಲಕಂಠಪ್ಪ:- ಮಾನ್ಯ ಅಧ್ಯಕ್ಷರೆ, ಅಲ್ಲಿ ಅಮೃತಮಹಲ್ ದನಗಳನ್ನು ಮೇಯುವುದಕ್ಕೆ ಬಿಡಿಸಿ. ಆದರೆ ಅಲ್ಲಿ ಕಾವಲುಗಾರರ ದನಗಳು ಮೇಯುವುದಕ್ಕೆ ಬಿಡಬಾರದೆನ್ನುವ ನಿರ್ಣಯ ತೆಗೆದುಕೊಂಡರೆ, ಅಮೃತಮಹಲ್ ತಳಿಯ ದನಗಳು ಮೇಯುವುದಕ್ಕೆ ಸಾಧ್ಯ ಆಗುತ್ತದೆ ಮತ್ತು ಇಡೀ ರಾಷ್ಟ್ರದಲ್ಲಿಯೇ ಆ ತಳಿ ಉಳಿದುಕೊಳ್ಳುತ್ತದೆ. ಇಲ್ಲದಿದ್ದರೆ ಆ ತಳಿ ಸಂಪೂರ್ಣವಾಗಿ ನಾಶವಾಗುತ್ತದೆ. ಆ ದನಗಳು ಮೇಯಲಿಕ್ಕೆ ಜಾಗವಿಲ್ಲದಂತಾಗುತ್ತದೆ. ಅವರಿಗೆ ಜಮೀನು ಕೊಡಿ. ಆದರೆ ಆ ಕಾವಲುಗಾರರ ದನಗಳು ಅಲ್ಲಿ ಮೇಯಲಿಕ್ಕೆ ಅವಕಾಶ ಕೊಡುವುದು ಬೇಡ. ತಳಿ ಅಭಿವೃದ್ಧಿಗೋಸ್ಕರ ಏನು ಅಮೃತಮಹಲ್ ದನಗಳು ಇವೆ ಅವುಗಳು ಮೇಯಲಿಕ್ಕೆ ಇರುವ ಜಾಗದಲ್ಲಿ ಕಾವಲುಗಾರರ ದನಗಳು ಮೇಯಲಿಕ್ಕೆ ಬಿಡಬಾರದೆಂದು ಆ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ.ಮಹದೇವ:- ಮಾನ್ಯ ಅಧ್ಯಕ್ಷರೆ, ಮೊದಲು ನಾವು ಬೌಂಡರಿಯನ್ನು ಫಿಕ್ಸ್ ಮಾಡಿಸುತ್ತೇವೆ. ಹಿಂದೆ ಅವರಿಗೆ 5 ಎಕರೆ ಜಮೀನು ಕೊಟ್ಟಿದ್ದಾರೆ, ಅವರು ಹಾಗೆಯೇ ಮೇನ್‌ಟೇನ್ ಮಾಡಿಕೊಂಡು ಬಂದಿದ್ದಾರೆ. ಆ ಐದು ಎಕರೆ ಒಳಗಡೆ ದನಗಳನ್ನು ಮೇಯಿಸಲಿಕ್ಕೆ ಅವರಿಗೆ ಸಧ್ಯಕ್ಕೆ ಅವಕಾಶವಿದೆ. ನಮ್ಮ ಕಾವಲಿನಲ್ಲಿರತಕ್ಕ ದನಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ. ಸರ್ಕಾರದಿಂದ ಅವರಿಗೆ ಒಂದು ಆದೇಶವನ್ನು ಕೊಟ್ಟಿದ್ದೇವೆ. ಈಗ ಏನು ಜಮೀನು ಕೊಡಲಾಗಿದೆ ಅಲ್ಲಿ ಮಾತ್ರ ಇರಬೇಕು. ಅದರ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳುವವರೆಗೆ ಎಂದು ಹೇಳಿದ್ದೇವೆ. ಕಾವಲುಗಳಲ್ಲಿ ಎಲ್ಲೆಲ್ಲಿ ಜಮೀನು ಕೊಡಲಾಗಿದೆ. ಅದರ ಬಗ್ಗೆ ಸಾಮೂಹಿಕವಾಗಿ ಒಂದು ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳಬೇಕಾಗಿದೆ. ಅವನ್ನು ಬಿಡಿಸತಕ್ಕದ್ದು ಅಥವಾ ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡುತ್ತೇವೆ.